ದಿನಾಂಕ **: 16.12.2025** ರಂದು ಡಿಡಬ್ಲ್ಯೂ - 1 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀ ಸವಾಲುಃ ಶ್ರೀಮತಿ ಕೆ.ಎಸ್., ವಾದಿ ಪರ ವಕೀಲರಿಂದಃ

ಸದಾಶಿವ ನಾಯ್ಕ ರವರು ಈ ಪ್ರಕರಣ ಸಲ್ಲಿಸಿರುವ ವಾದ ಪತ್ರವನ್ನು ನಾನು ಅನುಭವ ಮಾಡಿಕೊಂಡಿದ್ದೇನೆ. ಸದರಿಯವರು ಯಾವೆಲ್ಲಾ ದಾಖಲೆಗಳನ್ನು ನೀಡಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ. ವಾದಿಯು ನೀಡಿರುವ ದಾಖಲೆಗಳನ್ನು ನಾನು ನನ್ನ ವಕೀಲರ ಮೂಲಕವೂ ಅನುಭವ ಮಾಡಿಕೊಂಡಿರುವುದಿಲ್ಲ. ದಾವಾ ಸ್ವತ್ತು ಮೂಲತಃ ಚಂದು ನಾಯ್ಕ ರವರಿಗೆ ಸೇರಿರುತ್ತದೆ ಎಂದರೆ ಸರಿ. ಚಂದು ನಾಯ್ಕ ರವರು ಸ್ವತ್ತನ್ನು ಗೇಣಿಗೆ ವಹಿಸಿಕೊಂಡಿದ್ದರು ಎಂದರೆ ಸರಿ. ದಾವಾ ಸ್ವತ್ತಿನ ಧಣಿಗಳು ಯಾರು ಎಂದು ನನಗೆ ತಿಳಿದಿಲ್ಲ. ಭೂ ಮಸೂದೆ ಕಾಯ್ದೆ ಬರುವ ಸಮಯದಲ್ಲಿಯೇ ಚಂದು ನಾಯಕ್ ರವರು ಡಿಕ್ಲರೇಷನ್ ಅರ್ಜಿಯನ್ನು ನೀಡಿರುತ್ತಾರೆ ಎಂದರೆ ಸರಿ. ಡಿಕ್ಲರೇಷನ್ ಅರ್ಜಿಯನ್ನು ನೀಡಿರುವಂತೆ ಸಂಪೂರ್ಣ ಸ್ವತ್ತುಗಳು ಚಂದು ನಾಯಕ್ ರವರ ಹಸರಿಗೆ ಮಂಜೂರಾಗಿರುತ್ತದೆ ಎಂದರೆ ಸರಿ. ಈಗ ನನಗೆ ತೋರಿಸಿದ ನಿಪಿ - 5 ದಾಖಲೆಯು ಚಂದು ನಾಯ್ಕ ರವರು ಭೂ ನ್ಯಾಯ ಮಂಡಳಿಗೆ ನೀಡಿರುವ ಅರ್ಜಿಯಾಗಿರುತ್ತದೆ ಎಂದರೆ ಸರಿ. ಸದರಿ

ಅರ್ಜಿಯಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸರಿ ಇರುತ್ತದೆ. ಚಂದು ನಾಯ್ಕ ರವರು ಯಾವಾಗ ಮರಣ ಹೊಂದಿದ್ದಾರೆ ಎಂದು ನನಗೆ ತಿಳಿದಿರುವುದಿಲ್ಲ. ಚಂದು ನಾಯ್ಕ ರವರ ಹೆಂಡತಿಯ ಹೆಸರು ನನಗೆ ತಿಳಿದಿಲ್ಲ. ಚಂದು ನಾಯ್ಕ ರವರ ಹೆಂಡತಿ ಯಾವಾಗ ಮರಣ ಹೊಂದಿದ್ದಾರೆ ಎಂದು ನನಗೆ ತಿಳಿದಿಲ್ಲ. ನಾಯ್ಕ ರವರಿಗೆ 4 ಜನ ಮಕ್ಕಳಿದ್ದು, ಅವರ ಹೆಸರು ಬಾಬು ನಾಯ್ಕ, ಚಲ್ಲ ನಾಯ್ಕ , ಬಿಜಿಲು ಮತ್ತು ವನಜ ರವರು. ಚಂದು ನಾಯ್ಕ ರವರ ಹೆಂಡತಿ ಪದ್ದು ನಾಯ್ಕ ಎಂದರೆ ಆಗಿರಬಹುದು. ಚಂದು ನಾಯ್ಕ ರವರು ಭೂ ನ್ಯಾಯ ಮಂಡಳಿಗೆ ಅರ್ಜಿ ನೀಡುವ ಸಮಯದಲ್ಲಿ ಹಾಗೂ ಸ್ವತ್ತುಗಳು ಮಂಜೂರಾದ ಸಮಯದಲ್ಲಿ ಮತ್ತು ಅದರ ನಂತರದಲ್ಲಿ ಚಂದು ನಾಯ್ಕ ರವರು ಮರಣ ಹೊಂದುವ ತನಕ ಸ್ವತ್ತುಗಳು ಚಂದು ನಾಯ್ಕ, ಅವರ ಹೆಂಡತಿ ಮತ್ತು ಅವರ 4 ಮಕ್ಕಳ ಜಂಟಿ ಸ್ವಾಧೀನದಲ್ಲಿತ್ತು ಎಂದರೆ ಸರಿ. ಚಂದು ನಾಯಕ್ ರವರ ಜೊತೆ ಸೇರಿ ಅವರ ಹೆಂಡತಿ ಮತ್ತು ಮಕ್ಕಳು ಜಂಟಿಯಾಗಿ ದಾವಾ ಸ್ವತ್ತಿನ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿ. ಚಂದು ನಾಯ್ಕ ರವರು ಮೃತಪಟ್ಟ ನಂತರ ದಾವಾ ಸ್ವತ್ತುಗಳು ಚಂದು ನಾಯ್ಕ ರವರ 4 ಮಕ್ಕಳ ಸ್ವಾಧೀನಕ್ಕೆ ಬಂದಿರುತ್ತದೆ ಎಂದರೆ ಸರಿ. ಚಂದು ನಾಯ್ಕ ರವರ 4 ಜನ ಮಕ್ಕಳು ಜಂಟಿಯಾಗಿ ದಾವಾ ಸ್ವತ್ತಿನ ಸಾಗುವಳಿಯನ್ನು ಮಾಡಿಕೊಂಡು, ಅಭಿವೃದ್ಧಿ ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿ. ಡಿಕ್ಲರೇಷನ್ ಅರ್ಜಿಯನ್ನು ನೀಡುವ ಸಮಯದಲ್ಲಿ ನಿಪಿ - 5 ರಂತೆ ಚಂದು ನಾಯ್ಕ ರವರು, ಅವರ ಜೊತೆ ಇಬ್ಬರು ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ ಎಂದು

ನಮೂದಿಸಿದ್ದಾರೆ ಎಂದರೆ ಸರಿ. ಸದರಿ ಅರ್ಜಿಯಲ್ಲಿ ಅವರ ಮಕ್ಕಳು ಮೈನರ್ ಮಕ್ಕಳು ಎಂದು ಕಾಣಿಸಿರುತ್ತಾರೆ ಎಂದರೆ ಸರಿ. ಭೂ ನ್ಯಾಯ ಮಂಡಳಿಯಲ್ಲಿ ಚಂದು ನಾಯ್ಕು ರವರ ಹೆಸರಿಗೆ ದಾವಾ ಸ್ವತ್ತುಗಳು ಮಂಜೂರಾದ ನಂತರ ಚಂದು ನಾಯ್ಕು ರವರ ಹೆಸರಿಗೆ ಎಲ್ಲಾ ಕಂದಾಯ ದಾಖಲೆಗಳು ಬದಲಾವಣೆಯಾಗಿರುತ್ತದೆ ಎಂದರೆ ಸರಿ. ಚಂದು ನಾಯ್ಕು ಮತ್ತು ಅವರ ಹೆಂಡತಿಯ ಪೈಕಿ ಯಾರು ಮೊದಲು ಮೃತಪಟ್ಟಿರುತ್ತಾರೆ ಎಂದು ನನಗೆ ತಿಳಿದಿಲ್ಲ. ಚಂದು ನಾಯ್ಕು ಮೃತಪಟ್ಟ ನಂತರ ದಾವಾ ಸ್ವತ್ತುಗಳು ಚಂದು ನಾಯಕ್ ರವರ 4 ಜನ ಮಕ್ಕಳ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ. ಆದ್ದರಿಂದ ಚಂದು ನಾಯ್ಕು ರವರ 4 ಜನ ಮಕ್ಕಳು ದಾವಾ ಸ್ವತ್ತುಗಳಲ್ಲಿ ಸಮಾನ ಹಕ್ಕುದಾರರು ಎಂದರೆ ಸರಿ.

ದಿಃ11.04.1990 ರ ಪಾಲುಪಟ್ಟಿಯನ್ನು ನಾನು ಅನುಭವ ಮಾಡಿಕೊಂಡಿದ್ದೇನೆ. ಸದರಿ ಪಾಲುಪಟ್ಟಿಯಲ್ಲಿ ಅಂದರೆ ನಿಪಿ - 2 ರಲ್ಲಿ ಚಂದು ನಾಯಕ್ ರವರಿಗೆ 4 ಜನ ಮಕ್ಕಳು ಇದ್ದಾರೆ ಎಂದು ಕಾಣಿಸಿರುವುದಿಲ್ಲ. ಹೆಣ್ಣು ಮಕ್ಕಳಿಗೆ ಮದುವೆ ಮಾಡಿಕೊಟ್ಟಿದ್ದು, ಅವರಿಗೆ ಹಕ್ಕು ಬೇಡ ಎಂದು ಅವರು ಹೇಳಿದ ಕಾರಣ ಅವರನ್ನು ನಿಪಿ - 2 ರಲ್ಲಿ ಸೇರಿಸಿರುವುದಿಲ್ಲ. ನಿಪಿ 2 ರಲ್ಲಿ ಚಂದು ನಾಯ್ಕು ರವರ ಹೆಣ್ಣು ಮಕ್ಕಳು ತಮಗೆ ಮದುವೆ ಮಾಡಿಕೊಟ್ಟಿದ್ದು, ತಮಗೆ ಸ್ವತ್ತಿನಲ್ಲಿ ಹಕ್ಕು ಇರುವುದಿಲ್ಲ ಅಥವಾ ಪಾಲು ಬೇಡ ಎಂದು

ನಮೂದಿಸಿರುವುದಿಲ್ಲ ಎಂದರೆ ಸರಿ. ನಿಪಿ - 2 ರಲ್ಲಿ ಚಂದು ನಾಯ್ಕ ರವರಿಗೆ 4 ಮಕ್ಕಳು ಇದ್ದಾರೆ ಎಂದು ಮರೆಮಾಚಲಾಗಿದೆ ಎಂದರೆ ಸರಿ. ನಿಪಿ - 2 ರಲ್ಲಿ ಚಂದು ನಾಯ್ಕ ರವರು ಮೃತಪಟ್ಟ ನಂತರ ಇಬ್ಬರು ಮಕ್ಕಳಿಗೆ ಮಾತ್ರ ಹಕ್ಕು ಇರುತ್ತದೆ ಎಂದು ದುರುದ್ದೇಶದಿಂದ ಬರೆಯಲಾಗಿದೆ ಎಂದರೆ ಸರಿ. ಹೆಣ್ಣು ಮಕ್ಕಳು ಅವರಿಗೆ ಹಕ್ಕು ಬೇಡ ಎಂದು ಹೇಳಿದ ಕಾರಣ ಹಾಗೆ ಬರೆಯಲಾಗಿದೆ. ಚಂದು ನಾಯ್ಕ ರವರ ಇಬ್ಬರು ಹೆಣ್ಣು ಮಕ್ಕಳು ತಮಗೆ ಹಕ್ಕು ಬೇಡ ಎಂದು ಯಾವುದೇ ದಾಖಲೆಯನ್ನು ಬರೆದುಕೊಟ್ಟಿರುವುದಿಲ್ಲ.

ಚಂದು ನಾಯ್ಕ ರವರ ಮಗಳು ವನಜ ರವರ ಗಂಡನ ಹೆಸರು ನನಗೆ ನೆನಪಿಲ್ಲ. ವನಜ ರವರಿಗೆ ಯಾವಾಗ ಮದುವೆಯಾಗಿದೆ ಎಂದು ನನಗೆ ನೆನಪಿಲ್ಲ. ಚಂದು ನಾಯ್ಕ ರವರ ಮಗಳು ಬಿಜಿಲು ರವರ ಗಂಡನ ಹೆಸರು ನನಗೆ ಗೊತ್ತಿಲ್ಲ. ಬಿಜಿಲು ರವರಿಗೆ ಯಾವಾಗ ಮದುವೆಯಾಗಿದೆ ಎಂದು ನನಗೆ ನೆನಪಿಲ್ಲ. ವನಜ ಮತ್ತು ಬಿಜಿಲು ರವರ ಯಾವಾಗ ಮರಣ ಹೊಂದಿರುತ್ತಾರೆ ಎಂದು ನನಗೆ ತಿಳಿದಿಲ್ಲ. ನಾನು ಆ ಸಮಯದಲ್ಲಿ ಮದುವೆಯಾಗಿ ಗಂಡನ ಮನೆಗೆ ಹೋಗಿರುತ್ತೇನೆ. ನನಗೆ 2000 ನೇ ಇಸವಿಯಲ್ಲಿ ಮದುವೆಯಾಗಿರುತ್ತದೆ. ವನಜ ರವರಿಗೆ ಎಷ್ಟು ಮಕ್ಕಳು ಎಂದು ನನಗೆ ನೆನಪಿಲ್ಲ. ಬಿಜಿಲು ರವರಿಗೂ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ಚಂದು ನಾಯ್ಕ ರವರ ಮಗ ಚಲ್ಲು ನಾಯ್ಕ ರವರಿಗೆ ಅಂದಾಜಿನಲ್ಲಿ 11 ಜನ

ಮಕ್ಕಳು. ನನ್ನ ತಂದೆಗೆ ನಾವು ಮೂರು ಜನ ಮಕ್ಕಳು. ನನಗೆ 40 ವರ್ಷದಿಂದ ಚಂದು ನಾಯ್ಕ ರವರ ಹೆಣ್ಣು ಮಕ್ಕಳಾದ ಬಿಜಿಲು ಮತ್ತು ವನಜ ರವರ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಈ ಪ್ರಕರಣ ದಾಖಲಿಸಿದ ನಂತರ ವನಜ ಅಥವಾ ಬಿಜಿಲು ರವರ ಕುಟುಂಬದ ಬಗ್ಗೆ ನಾನು ತಿಳಿದುಕೊಳ್ಳಲು ಪ್ರಯತ್ನಿಸಿರುವುದಿಲ್ಲ. 1990 ರ ಪಾಲುಪಟ್ಟಿಯಲ್ಲಿ ಹೆಣ್ಣು ಮಕ್ಕಳಿಗೆ ಹಕ್ಕು ನೀಡಬಾರದು ಎನ್ನುವ ಉದ್ದೇಶದಿಂದ ಚಂದು ನಾಯ್ಕ ರವರ ಇಬ್ಬರು ಗಂಡು ಮಕ್ಕಳ ನಡುವೆ ಮಾಡಿಕೊಂಡತಹ ಪಾಲುಪಟ್ಟಿ ಎಂದರೆ ಸರಿ. ಚಂದು ನಾಯ್ಕ ರವರ ಹೆಸರಿಗೆ ಮಂಜೂರಾದಂತಹ ಸ್ವತ್ತಿನಲ್ಲಿ ಅವರ 4 ಜನ ಮಕ್ಕಳಿಗೆ ಸಮಾನವಾದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. 1990 ರ ಪಾಲು ಪಟ್ಟಿ ಮಾಡಿಕೊಳ್ಳುವ ಸಮಯದಲ್ಲಿ ಬಿಜಿಲು ಮತ್ತು ವನಜ ರವರಿಗೆ ನಿಪಿ - 2 ರಂತೆ ಪಾಲುಪಟ್ಟಿ ಮಾಡಿಕೊಳ್ಳುತ್ತಿದ್ದು, ನಿಮಗೆ ಯಾವುದೆ ಹಕ್ಕು ಇರುವುದಿಲ್ಲ ಎಂದು ಬಾಬು ನಾಯ್ಕ ಮತ್ತು ಚಲ್ಲು ನಾಯ್ಕ ರವರು ಲಿಖಿತವಾಗಿ ಯಾವುದೇ ನೋಟೀಸು ನೀಡಿರುವುದಿಲ್ಲ.

ನಿಪಿ - 6 ದಾಖಲೆಯಾಗುವ ಸಮಯದಲ್ಲಿ ಬಿಜಿಲು ಮತ್ತು ವನಜ ರವರ ವಾರೀಸುದಾರರಿಗೆ ಲಿಖಿತವಾಗಿ ಯಾವುದೇ ನೋಟೀಸು ನೀಡಿರುವುದಿಲ್ಲ. ನಿಪಿ - 2 ರ ಪಾಲುಪಟ್ಟಿಯಲ್ಲಿ ಚಂದು ನಾಯ್ಕರ ಎಲ್ಲಾ ಮಕ್ಕಳು ಸೇರಿರದ ಕಾರಣ ನಿಪಿ - 2 ದಾಖಲೆಯು ಊರ್ಜಿತವಾಗಿರುವುದಿಲ್ಲ

ಎಂದರೆ ನನಗೆ ಗೊತ್ತಿಲ್ಲ. ನಿಪಿ - 2 ರ ನಂತರ ಆದಂತಹ ಎಲ್ಲಾ ದಾಖ್ಲೆಲಗೆಳಿಗೆ ವನಜ ಮತ್ತು ಬಿಜಿಲು ರವರ ಮಕ್ಕಳು ಒಪ್ಪಿಗೆ ನೀಡದ ಕಾರಣ, ಸದರಿ ದಾಖಲೆಗಳು ಊರ್ಜಿತವಾಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

23 ನೇ ಪ್ರತಿವಾದಿ ಯಾರು ಎಂದು ನನಗೆ ತಿಳಿದಿರುತ್ತದೆ.

ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,
ಕಾರ್ಕಳ.